# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 160/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಶಶಿಕುಮಾರ್.ಬಿ.ಎಸ್ | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ ಶ್ರೀ ಶಿವಲಿಂಗೇಗೌಡ | 15.03.2024 | |
| ವಯಸ್ಸು | ಃ 31 ವರ್ಷ | | |
| ವೃತ್ತಿ | ಃ ವ್ಯವಸಾಯ | ಪ್ರಾ.ಸಾ. | ಃ 05 |
| ವಾಸಸ್ಥಳ | ಃ ಕೆ.ಆರ್.ನಗರ | ಚಾ.ಸಾ. | ಃ 13 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಅದ್ವೈತ ರೆಸಿಡೆನ್ಸಿ ಹೊಟೇಲ್ ನಲ್ಲಿ *2022* ನೇ ವರ್ಷದ *3-4* ತಿಂಗಳು ರೂಮ್ ಬಾಯ್ ಆಗಿ ಕೆಲಸ ಮಾಡಿದ್ದೆ. ಮೃತ ಪ್ರಜ್ವಲ್ ಸಹ ಆ ಕಾಲಕ್ಕೆ ರೂಮ್ ಬಾಯ್ ಆಗಿ ಕೆಲಸ ಮಾಡುತ್ತಿದ್ದ. ಆ ಕಾಲಕ್ಕೆ ಒಂದು ದಿನ ನಾನು ಹೊಟೇಲ್ ನಿಂದ ಹೊರಗಡೆ ಟೀ ತರಲು ಹೋಗಿದ್ದಾಗ ಪ್ರಜ್ವಲ್ ನು ಡ್ರೆಸ್ ಚೆಂಜ್ ಮಾಡಲು ಹೊದವನು ಕಟ್ಟಡದ ಮೇಲಕ್ಕೆ ಹೋಗಿ ಬಿದಿದ್ದ. ಅವನು ಕೆಳಗೆ ಬಿದ್ದ ಮೇಲೆ ನನಗೆ ಆ ಬಗ್ಗೆ ಗೊತ್ತಾಗಿತ್ತು. ಪ್ರಜ್ವಲ್ ಕಟ್ಟಡದ ಮೇಲಿನಿಂದ ಬೀಳುವ ಮೊದಲು ನನಗೆ ಏನನ್ನು ಹೇಳಿರಲಿಲ್ಲ. ಹೋಟೆಲ್ ನ ಹೊರಗಡೆ ಗಲಾಟೆ ಆದ ಕಾರಣಕ್ಕೆ ಸೂಪರ್ ವೈಸರ್ ಡ್ರೆಸ್ ಚೆಂಜ್ ಮಾಡಲು ಪ್ರಜ್ವಲ್ ನ್ನು ಕರೆದುಕೊಂಡು ಹೋಗಿದ್ದರು ಆದರೆ ಯಾವ ಕಾರಣಕ್ಕೆ ಮತ್ತು ಯಾರೊಂದಿಗೆ ಗಲಾಟೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಪ್ರಜ್ವಲ್ ಕಟ್ಟಡದ ಮೇಲಿನಿಂದ ಬಿದ್ದ ದಿನಾಂಕ ಗೊತ್ತಿಲ್ಲ. ಪ್ರಜ್ವಲ್ ಯಾವ ಕಾರಣಕ್ಕೆ ಬಿದ್ದ ಎಂದು ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ದಿಃ*13.01.2022* ರಂದು ಮ.*12.20* ಕ್ಕೆ ನಾನು ಅದ್ವೈತ ರೆಸಿಡೆನ್ಸಿ ಯಲ್ಲಿ ಕೆಲಸ ಮಾಡುವಾಗ ಪ್ರಜ್ವಲ್ ನೊಂದಿಗೆ ಯಾರೋ ಗಲಾಟೆ ಮಾಡುತ್ತಿದ್ದಾರೆ ಎಂದು ತಿಳಿದು ನಾನು ಹೊರಗೆ ಬರುವಷ್ಟರಲ್ಲಿ ಪ್ರಜ್ವಲ್ ಒಳಗೆ ಬರುತ್ತಿದ್ದ ಎಂದರೆ ನಿಜ. ಆ ಕಾಲಕ್ಕೆ ಪ್ರಜ್ವಲ್ ಡ್ರೆಸ್ ಚೇಂಜ್ ಮಾಡಲು ಹೋದಾಗ ನಾನು ಮತ್ತು ಖಲೀಲ್ ಅವನ ಹಿಂದೆ ಹೊಗಿದ್ದೆವು ಎಂದರೆ ನಿಜ. ಆ ಕಾಲಕ್ಕೆ ನಾವು ಪ್ರಜ್ವಲ್ ನನ್ನು ವಿಚಾರಿಸಿದಾಗ, ಪ್ರಜ್ವಲ್ ನು ಗೌರಮ್ಮ ಎಂಬ ಹೆಂಗಸಿನ ಜೊತೆ ಪೋನ್ ನಲ್ಲಿ ಮಾತನಾಡುತ್ತಿದ್ದ ಕಾರಣ ಆ ಗೌರಮ್ಮನ ಗಂಡ ಮತ್ತು ಆತನ ಕಡೆಯವರು ಬಂದು ಗಲಾಟೆ ಮಾಡುತ್ತಿದ್ದಾರೆ ಇವತ್ತು ನನ್ನನ್ನು ಉಳಿಸುವುದಿಲ್ಲ ಸಾಯಿಸುತ್ತಾರೆ ಎಂದು ಹೇಳಿದಾಗ ನಾನು ಮತ್ತು ಖಲೀಲ್ ಸಮಾಧಾನಪಡಿಸಿದ್ದೇವು ಎಂದರೆ ಸರಿಯಲ್ಲ. ಈ ಕುರಿತು ಅವನು ------- ಬರುತ್ತಿದ್ದನು ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*10* ಎಂದು ಗುರುತಿಸಿದೆ. ಆ ದಿನ ನಾನು ಮತ್ತು ಖಲೀಲ್ ಮುಂದೆ ಬರುತ್ತಿರುವಾಗ ನಮ್ಮ ಹಿಂದೆ ಬರುತ್ತಿದ್ದ ಪ್ರಜ್ವಲ್ ಬ್ಯಾಗ್ ಬೀಳಿಸಿದಾಗ ನಾವು ಹಿಂದಕ್ಕೆ ತಿರುಗಿ ನೋಡುತ್ತಿದ್ದಂತೆ ಬಿಲ್ಡಿಂಗ್ ಮೇಲಿಂದ ರಾಜ್ ಕಮಲ್ ಟಾಕೀಸ್ ಕಡೆ ಹಾರಿದ್ದ ಎಂದರೆ ನಿಜ. ನಂತರ ಪ್ರಜ್ವಲ್ ಚಿಕಿತ್ಸೆ ಪಡೆಯುವಾಗ ಮರಣಹೊಂದಿದ್ದ ಎಂದರೆ ನಿಜ. ಗೌರಮ್ಮನ ಗಂಡ ಮತ್ತು ಆತನ ಕಡೆಯವರು ಹೊಡೆದು ಸಾಯಿಸುತ್ತಾರೆ ಎಂದು ಭಯದಿಂದ ಬಿದ್ದು ಮರಣಹೊಂದಿದ್ದ ಎಂದರೆ ನಿಜ.

ಕೋರ್ಟ್ ಮುಂದೆ ಇರುವ ಆರೋಪಿತರು ಆ ದಿನ ರೆಸಿಡೆನ್ಸಿ ಬಳಿ ಬಂದಿದ್ದ ವ್ಯಕ್ತಿಗಳು ಇರುತ್ತಾರೆ ಎಂದರೆ ಗೊತ್ತಿಲ್ಲ.

ಪಾಟೀ ಸವಾಲು ಃ 1ನೇ ಆರೋಪಿ ಪರ ಯು.ಎಸ್ ವಕೀಲರ ಪರವಾಗಿ ಸಿ.ಎನ್.ಆರ್ ವಕೀಲರವರಿಂದಃ-

*3.* ನನಗೆ ಆ ಘಟನೆ ವಿಚಾರ ಪೂರ್ತಿ ಗೊತ್ತಿಲ್ಲ ಎಂದರೆ ನಿಜ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ ಎಂದರೆ ನಿಜ. ಆ ದಿನ ನಾನು ಆರೋಪಿತರನ್ನು ನೋಡಿಲ್ಲ ಎಂದರೆ ನಿಜ. ಆ ದಿನ ಘಟನೆ ಕಾಲಕ್ಕೆ ಆ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2ನೇ ಆರೋಪಿತನ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು